ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ

ಸಿ.ಸಿ.ನಂಬರಃ **117/2018**

ಪಿರ್ಯಾದುದಾರರುಃ ರಾಜ್ಯದ ಪರ ಜೇವರ್ಗಿ ಠಾಣೆ

ವಿರುದ್ಧ

ಆರೋಪಿಃ 1. ಸಿದ್ದಪ್ಪ @ ಸಿದ್ದಣ್ಣ ತಂದೆ ಭಾಗಣ್ಣ ದೊಡ್ಡಮನಿ,
ವಯಸ್ಸುಃ 27 ವರ್ಷ, ಉಃ ಸರಕಾರಿ ನೌಕರ,
ವಾಸಃ ಕೋಳಕೂರ, ತಾಃ ಜೇವರ್ಗಿ, ಜಿಃ ಕಲಬುರಗಿ.
ಹಾಲಿ ವಸತಿಃ ಬ್ಯಾಂಕ್ ಕಾಲೋನಿ, ಗುಲಬರ್ಗಾ (In CC No.119/2018)

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ **1:** ಈ ಮೊಕದ್ದಮೆಯಲ್ಲಿ ವಿಚಾರಣೆಯಾದ ಸಾಕ್ಷಿದಾರರ ಪ್ರಮಾಣ ಪೂರ್ವಕ ಸಾಕ್ಷ್ಯವನ್ನು ನೀವು ಕೇಳಿದ್ದೀರಾ?

ಉಃ

ಪ್ರಶ್ನೆಃ **2:** ಫ್ರಾಸಾ **15/17** ಖಾಜಾಪಟೇಲರವರು ತಮ್ಮ ಸಾಕ್ಷ್ಯದಲ್ಲಿ, 2 ನೇ ಆರೋಪಿ ಕಂದಾಯ ಇಲಾಖೆಯಲ್ಲಿ ಕಂದಾಯ ನಿರೀಕ್ಷಕರಿದ್ದರೆಂದು ಹಾಗೂ 1 ನೇ ಆರೋಪಿಗೆ ಯೋಜನಾ ನಿರಾಶ್ರಿತರು ಅಂತಾ ಪ್ರಮಾಣ ಪತ್ರ ನೀಡಿದ್ದರೆಂದು ಹಾಗೂ ಸದರಿ ಪ್ರಮಾಣ ಪತ್ರ ಪ್ರಶ್ನೆ ಮಾಡಿ ದಿನಾಂಕ19-07-2009 ರಂದು ತಹಸಿಲ್ದಾರರವರಿಗೆ ಒಂದು ಅರ್ಜಿ ಬಂದಿತ್ತು ಎಂದು ಹಾಗೂ ತಹಸಿಲ್ದಾರರವರು ಸದರಿ ಪ್ರಮಾಣ ಪತ್ರ ಕಾನೂನುಬದ್ಧವಾಗಿದೆಯೇ ಎಂದು ಪರಿಶೀಲಿಸಿ ವರದಿ ನೀಡುವಂತೆ ನನಗೆ ಆದೇಶ ಮಾಡಿದ್ದರೆಂದು ಹಾಗೂ ದಿನಾಂಕ 18-08-2009 ರಂದು ಕೋಳಕೂರು ಗ್ರಾಮದ ಲೆಕ್ಕಾಧಿಕಾರಿ ಹಾಗೂ ತಾನು ಕೋಳಕೂರು ಗ್ರಾಮಕ್ಕೆ ಭೇಟಿ ನೀಡಿ ಪಂಚರನ್ನು ಬರಮಾಡಿಕೊಂಡು ಅವರಿಗೆ ವಿಷಯ ತಿಳಿಸಿ ಕೋಳಕೂರು ಗ್ರಾಮದ ಸ.ನಂ.299 ಕ್ಕೆ ಭೇಟಿ ನೀಡಿ ಪಂಚರಿಗೆ ಮತ್ತು ಅರ್ಜಿ ಕೊಟ್ಟ ಭಾಗಣ್ಣ ದೊಡ್ಮನಿ ಇವರನ್ನು ವಿಚಾರಣೆಗೆ ಬರಮಾಡಿ ಪಂಚರಾದ ಮುತ್ತಪ್ಪ, ಮರೆಪ್ಪ ಹಾಗೂ ಇನ್ನೊಬ್ಬರ ಹೇಳಿಕೆ ಪಡೆದುಕೊಂಡೆವು ಎಂದು ಹಾಗೂ ಅದೇ ಸಮಯದಲ್ಲಿ ಕೋಳಕೂರು ಗ್ರಾಮದ ಗ್ರಾಮ ಲೆಕ್ಕಾಧಿಕಾರಿ ಮತ್ತು ಪಂಚರಾದ ನಿಂಗಣ್ಣ ಬಸಲಿಂಗಪ್ಪ ಇದ್ದರು ಹಾಗೂ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ**?**

ಉಃ

ಪ್ರಶ್ನೆಃ **3:** ಫ್ರಾಸಾ **16/18** ರೇವಣಸಿದ್ದಪ್ಪರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಸಿದ್ದಪ್ಪ ತಮ್ಮ ಉಪವಿಭಾಗದಲ್ಲಿ ಕಿರಿಯ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸಿದ್ದನೆಂದು ಹಾಗೂ ಜೇವರ್ಗಿ ಪೊಲೀಸರು ಆರೋಪಿ ಸಿದ್ದಪ್ಪನ ನೇಮಕಾತಿಯ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಕೊಡುವಂತೆ ಕೋರಿದ್ದ ಮೇರೆಗೆ ತಾನು ಸಿದ್ದಪ್ಪರರ ನೇಮಕಾತಿ ಆದೇಶದ ದೃಢೀಕೃತ ಪ್ರತಿಯನ್ನು ಮತ್ತು ರಿಪೋಸ್ಟಿಂಗ್ ಆದ ಆದೇಶದ ಪ್ರತಿಯನ್ನು ಮತ್ತು ಆತನ

ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿಯನ್ನು ನೀಡಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ**?**

ಉಃ

ಪ್ರಶ್ನೆಃ **4:** ಪ್ರಾಸಾ **17/19** ದೌಲತಗೌಡರವರು ತಮ್ಮ ಸಾಕ್ಷ್ಯದಲ್ಲಿ ಜೇವರ್ಗಿಯ ಆರಕ್ಷಕ ಉಪನಿರೀಕ್ಷಕರ ಕೋರಿಕೆಯ ಮೇರೆಗೆ ದಿನಾಂಕ 13-04-2010 ರಂದು ಸಿದ್ದಣ್ಣ ತಂದೆ ಭಾಗಣ್ಣ ಸಾಃ ಕೋಳಕೂರು ಇವರಿಗೆ ಸಂಬಂದಿಸಿದಂತೆ ಇರುವ 10 ಮೂಲ ದಾಖಲೆಗಳನ್ನು ಕವರಿಂಗ್ ಲೆಟರಿನೊಂದಿಗೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **5:** ಪ್ರಾಸಾ **18/20** ಶಂಕರಪ್ಪರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20-08-2010 ಂರದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವೊಂದು ದಾಖಲೆಗಳನ್ನು ಸೀಲಾದ ಲಕೋಟೆಯಲ್ಲಿ ಪೊಲೀಸ್ ಮುಖ್ಯ ಪೇದೆ-489 ರವರ ಮುಖಾಂತರ ಸಂಬಂಧಪಟ್ಟ ಕೋರಿಕೆಯು ಪತ್ರದೊಂದಿಗೆ ತನಿಖಾಧಿಕಾರಿಗಳು ಪರೀಕ್ಷೆಗಾಗಿ ಕಳುಹಿಸಿದ್ದರೆಂದು ಹಾಗೂ ಕಳುಹಿಸಿದಂತಹ ದಾಖಲೆಗಳಲ್ಲಿ ವಿವಾದಿತ ಸಹಿಗಳುಳ್ಳ ಯೋಜನಾ ನಿರ್ರಾಶ್ರಿತರ ಪ್ರಮಾಣ ಪತ್ರ, ಒಂದು ಅಫಿಡವಿಟ್ ಮತ್ತು ಫಾರಂ ನಂ.3, ಇನ್ನೊಂದು ವಿವಾದಿತ ದಾಖಲೆ ತಹಸಿಲ್ದಾರ ಜೇವರ್ಗಿರವರಿಗೆ ನಮೂದಾಗಿದ್ದು, ಪಂಚನಾಮೆ ಪತ್ರ, ವಂಶಾವಳಿ ದಾಖಲೆಗಳೊಂದಿಗೆ ಸಿದ್ದಪ್ಪ ದೊಡ್ಡಮನಿರವರ ಮಾದರಿ ಸಹಿಗಳನ್ನು ಹಾಗೂ ತನಿಖಾಧಿಕಾರಿ ಗುರುಸ್ವಾಮಿರವರ ಬರಹ ಸಹಿಗಳನ್ನು ಎರಡು ಹಾಳೆಗಳಲ್ಲಿ ಕಳಹಿಸಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**ಉಃ**

ಪ್ರಶ್ನೆಃ **6:** ಪ್ರಾಸಾ **18/20** ಶಂಕರಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ತನಿಖಾಧಿಕಾರಿಗಳು ಮಾರಪ್ಪ ಮತ್ತು ಮುತ್ತಣ್ಣರವರ ಸಹಿಗಳುಳ್ಳ ಮಾದರಿ ಸಹಿಗಳನ್ನು ಸ್ಟೇಟಮೆಂಟ್ ದಿನಾಂಕ 18-08-2009 ರಂದು ವೈಜ್ಞಾನಿಕ ಪರೀಕ್ಷೆಗಾಗಿ ಕಳುಹಿಸಿದ್ದರೆಂದು ಸದರಿ ದಾಖಲೆಗಳಲ್ಲಿಯ ಬರಹ ಸಹಿಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ತಾನು ಅಭಿಪ್ರಾಯ ಪತ್ರವನ್ನು ನೀಡಿದ್ದೇನೆಂದು ಹಾಗೂ ಅವರ ಅಭಿಪ್ರಾಯದಲ್ಲಿ ಮಾದರಿ ಸಹಿ ಆರ್-1 (ಮಾರಪ್ಪ)ಗಳನ್ನು ಬರೆದ ವ್ಯಕ್ತಿ ವಿವಾದಿತ ಸಹಿ ಕ್ಯೂ-1 ನ್ನು ಬರೆದಿರುವುದಿಲ್ಲವೆಂದು ಹಾಗೂ ಮಾದರಿ ಸಹಿ ಆರ್-2 (ಮುತ್ತಪ್ಪ) ಗಳನ್ನು ಬರೆದ ವ್ಯಕ್ತಿ ವಿವಾದಿತ ಸಹಿ ಕ್ಯೂ-2 ನ್ನು ಬರೆದಿರುವುದಿಲ್ಲವೆಂದು ಹಾಗೂ ಮಾದರಿ ಸಹಿಗಳಾದ ಎಸ್-7 ರಿಂದ ಎಸ್.-9 ಗಳನ್ನು ಬರೆದ ವ್ಯಕ್ತಿಯ ವಿವಾದಿತ ಸಹಿಗಳಾದ ಪಿ-1, ಪಿ-1(ಎ) ಪಿ-1(ಬಿ) ಬರೆದಿರುತ್ತಾರೆಂದು ಹಾಗೂ (ಸಿದ್ದಪ್ಪ) ಮಾದರಿ ಬರಹ ಸಹಿಗಳಾದ ಎಸ್-10, ಎಸ್.-10(ಎ), ಎಸ್-11 ರಿಂದ 13 ಗಳನ್ನು ಬರೆದಿರುವ ವ್ಯಕ್ತಿಯೇ ವಿವಾದಿತ ಬರಹ ಸಹಿಗಳಾದ ಪಿ-2 ರಿಂದ ಪಿ-4, ಪಿ-2(ಎ) ಯಿಂದ ಪಿ-4(ಎ) ಗಳನ್ನು ಬರೆದಿರುತ್ತಾರೆಂದು (ಗುರುಸ್ವಾಮಿ) ತಾನು ಮೇಲೆ ನೀಡಿದ ಅಭಿಪ್ರಾಯದಂತೆ ತಾನು ವರದಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **7:** ಪ್ರಾಸಾ **18/20** ಶಂಕರಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ತಾನು ನಿಪಿ-25ರಲ್ಲಿ ನೀಡಿದ ಅಭಿಪ್ರಾಯಗಳಿಗೆ ಕಾರಣಗಳನ್ನು ಐದು ಪುಟಗಳಲ್ಲಿ ಹಾಗೂ ಛಾಯಾಚಿತ್ರದ ಪ್ರತಿಗಳನ್ನು ನಿಪಿ-25ರೊಂದಿಗೆ ಹಾಗೂ ಸೀಲಾದ ಲಕೋಟೆಯಲ್ಲಿ ತನ್ನ ಕಚೇರಿಯ ಮಾದರಿ ಮೊಹರಿನೊಂದಿಗೆ ಕಳುಹಿಸಿಕೊಟ್ಟಿದ್ದೇನೆಂದು ಹಾಗೂ ನಿಪಿ-32 ರ ಮೇಲೆ ಸಿದ್ದಪ್ಪ ತಂದೆ ಭಾಗಣ್ಣರವರ ಸಹಿ ಇರುತ್ತದೇಂದು ಹಾಗೂ ನಿಪಿ-33 ರಿಂದ 35 ರ ಮೇಲೆ ಕಂದಾಯ ನಿರೀಕ್ಷಕರ ಹಾಗೂ ಕ್ಯೂ-1 ಮತ್ತು 2 ಎಂದು ಗುರುತಿಸಿರುವ ನಿಪಿ-34ರ ದಾಖಲೆಯ ಮೇಲೆ ಕಂದಾಯ ನಿರೀಕ್ಷಕರು ಮತ್ತು ಪಂಚರ ಸಹಿಗಳು ಇರುತ್ತವೆಂದು ಹಾಗೂ ನಿಪಿ-36ರ ಮೇಲೆ ಸಿದ್ದಪ್ಪ ತಂದೆ ಭಾಗಣ್ಣರವರ ಸಹಿ ಇರುತ್ತದೆಂದು ಹಾಗೂ ನಿಪಿ-18ರ ಮೇಲೆ ಮರೆಪ್ಪ ಮತ್ತು ಮುತ್ತಪ್ಪರವರ ಹೇಳಿಕೆ ಪತ್ರದಲ್ಲಿಯ ಸಹಿಗಳಾಗಿವೆ ಎಂದು, ನಿಪಿ-38ರ ದಾಖಲೆಯ ಮೇಲೆ ನಿವೃತ್ತ ಗುರುಸ್ವಾಮಿರವರ ಸಹಿ ಬರಹಗಳಿವೆ ಎಂದು ಹಾಗೂ ನಿಪಿ-39 ದಾಖಲೆಯ ಮೇಲೆ ಗುರುಸ್ವಾಮಿರವರ ಮಾದರಿ ಸಹಿಗಳಿವೆಯೆಂದು ಹಾಗೂ ನಿಪಿ-40ರ ಮೇಲೆ ಸಿದ್ದಪ್ಪ @ ಸಿದ್ದಣ್ಣ ಭಾಗಣ್ಣ ದೊಡ್ಡಮನಿ ಸಾಃ ಕೋಳಕೂರರವರ ಸಹಿಗಳಿವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **8:** ಪ್ರಾಸಾ **19** ಭಾಗಣ್ಣ ಸಾಯಬಣ್ಣ ದೊಡ್ಡಮನಿರವರು ತಮ್ಮ ಸಾಕ್ಷ್ಯದಲ್ಲಿ, ತನಗೆ ಸೇರಿದ ಸ.ನಂ.299ರ 5 ಎಕರೆ ವಿಸ್ತೀರ್ಣದ ಪೈಕಿ 00-24 ಗುಂಟೆ ಜಮೀನು ಕಾಲುವೆಗಾಗಿ ಭೂಸ್ವಾಧೀನವಾಗಿರುತ್ತದೆಂದು ಹಾಗೂ 1 ನೇ ಆರೋಪಿಯ ತಂದೆ ಹೆಸರು ನನ್ನ ಹೆಸರು ಒಂದೇ ಇರುತ್ತದೆಂದು ಹಾಗೂ ಅದನ್ನು 1 ನೇ ಆರೋಪಿ ದುರುಪಯೋಗ ಮಾಡಿಕೊಂಡು ಕಾಲುವೆಗೆ ಭೂಸ್ವಾಧೀನವಾಗಿರುವುದಕ್ಕೆ ಸಂಬಂಧಿಸಿದಂತೆ ನಿರಾಶ್ರಿತರ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆಂದು ಹಾಗೂ ಸದರಿ ನಿರಾಶ್ರಿತರ ಪ್ರಮಾಣ ಪತ್ರದ ಮೇರೆಗೆ 1ನೇ ಆರೋಪಿ ನೌಕರಿ ಪಡೆದಿರುತ್ತಾನೆಂದು ಹಾಗೂ 1ನೇ ಆರೋಪಿ ತನಗೆ ಸಂಬಂಧಿಕನಲ್ಲವೆಂದು ಹಾಗೂ ಆರೋಪಿಗಳ ಸರ್ವೆ ನಂಬರ್ 333 ಇರುತ್ತದೆಂದು ಹಾಗೂ 1 ನೇ ಆರೋಪಿಗೆ ಮತ್ತು ತನಗೆ ಸೇರಿದ ಸರ್ವೆ ನಂಬರ್ 299ಕ್ಕೆ ಯಾವುದೇ ಸಂಬಂಧವಿರುವುದಿಲ್ಲವೆಂದು ಹಾಗೂ ಸದರಿ ಸಂಗತಿ ತನಗೆ ಗೊತ್ತಾದ ನಂತರ 1 ನೇ ಆರೋಪಿ ಮೋಸ ಮಾಡಿದ ಬಗ್ಗೆ ತಹಸಿಲ್ದಾರರವರಿಗೆ ಅರ್ಜಿ ಸಲ್ಲಿಸಿರುತ್ತೇನೆಂದು ಹಾಗೂ ಅದೇ ರೀತಿ ಪೊಲೀಸ್ ಠಾಣೆಗೆ ಹೋಗಿ ಅರ್ಜಿ ಕೊಟ್ಟಿರುತ್ತೇನೆಂದು ಹಾಗೂ ಪೊಲೀಸರು ಕೇಸು ತೆಗೆದುಕೊಂಡಿರುವುದಿಲ್ಲವೆಂದು ನಂತರ ವಕೀಲರ ಮುಖಾಂತರ ನ್ಯಾಯಾಲಯದಲ್ಲಿ ಪಿರ್ಯಾದು ಸಲ್ಲಿಸಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**ಉಃ**

ಪ್ರಶ್ನೆಃ **9:** ಪ್ರಾಸಾ-**23** ಶರಣಪ್ಪರವರು ತಮ್ಮ ಸಾಕ್ಷ್ಯದಲ್ಲಿ, ಬೆಂಗಳೂರಿನ ಪೊಲೀಸ್ ಅಧೀಕ್ಷಕರ ಆದೇಶದ ಮೇರೆಗೆ ಜೇವರ್ಗಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 172/2009 ಕ್ಕೆ ಸಂಬಂಧಿಸಿದಂತೆ ಪ್ರಕರಣದಲ್ಲಿ ಒಪ್ಪಿತ ಮತ್ತು ವಿವಾದಿತ ಬೆರಳು ಮುದ್ರೆಗಳನ್ನು ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಆದೇಶ ಬಂದಿತ್ತು ಎಂದು ಹಾಗೂ ವಿವಾದಿತ ಬೆರಳು ಮುದ್ರೆಗಳನ್ನು ಬೆಂಗಳೂರು ಬೆರಳು ಮುದ್ರೆ ಸಂಗ್ರಹಾಲಯದಲ್ಲಿ ಛಾಯಾ ಚಿತ್ರ ಮಾಡಿಸಿರುತ್ತೇನೆಂದು ಹಾಗೂ ದಿನಾಂಕ 19-10-2011 ರಂದು ಪ್ರಕರಣದಲ್ಲಿನ ಒಪ್ಪಿತ ಮತ್ತು ವಿವಾದಿತ ಬೆರಳು ಮುದ್ರೆಗಳ ಛಾಯಾ ಚಿತ್ರಗಳನ್ನು ರಾಯಚೂರು ಘಟಕ ಸಿಬ್ಬಂದಿಗಳಿಂದ ಸ್ವೀಕರಿಸಿ ಪ್ರಕರಣದಲ್ಲಿರುವ

ದಾಖಲೆಗಳನ್ನು ಮತ್ತು ಅವುಗಳಲ್ಲಿರುವ ಒಪ್ಪಿತ ಮತ್ತು ವಿವಾದಿತ ಬೆರಳು ಮುದ್ರೆಗಳನ್ನು ಪರೀಕ್ಷಿಸಿ ಪೂರ್ಣಗೊಳಿಸಿ ಬೆರಳು ಮುದ್ರೆ ತಜ್ಞರ ಅಭಿಪ್ರಾಯದ ಪ್ರಮಾಣ ಪತ್ರ ನೀಡಿರುತ್ತೇನೆಂದು ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **10:** ಫ್ರಾಸಾ-**23** ಶರಣಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 29-03-2012 ರಂದು ತಜ್ಞರ ಅಭಿಪ್ರಾಯದ ವರದಿಯೊಂದಿಗೆ ಎಲ್ಲಾ ಮೂಲ ದಾಖಲಾತಿಗಳನ್ನು ಬೆಂಗಳೂರು ಬೆರಳು ಮುದ್ರೆ ಸಂಗ್ರಹಾಲಯಕ್ಕೆ ಸಲ್ಲಿಸಿರುತ್ತೇನೆಂದು ಹಾಗೂ ಬೆಂಗಳೂರು ಬೆರಳು ಮುದ್ರೆ ಸಂಗ್ರಹಾಲಯದ ಪೊಲೀಸ್ ಅಧೀಕ್ಷಕರು ತಮ್ಮ ಕಚೇರಿ ಮುಖಾಂತರ ತಜ್ಞರ ಅಭಿಪ್ರಾಯದ ವರದಿಯ ಜೊತೆಗೆ ಎಲ್ಲಾ ಮೂಲ ದಾಖಲೆಗಳನ್ನು ಜೇವರ್ಗಿಯ ಆರಕ್ಷಕ ಉಪ ನಿರೀಕ್ಷಕರಿಗೆ ರವಾನಿಸಿರುತ್ತೇನೆಂದು ಹಾಗೂ ಕ್ಯೂ-3, 4 ಮತ್ತು ಆರ್-3 ಮತ್ತು 4 ವಿವಾದಿತ ಬೆರಳು ಮುದ್ರೆಗಳನ್ನು 9 ಬೆರಳು ಮುದ್ರಾ ಪತ್ರದಲ್ಲಿ ಪಡೆದಿದೆ ಎನ್ನಲಾದ ಬಸ್ಸಣ್ಣ ತಂದೆ ಸಾಯಬಣ್ಣ, ಮಹಾದೇವ ತಂದೆ ಸಾಯಬಣ್ಣ ಮತ್ತು ಸಿದ್ದಪ್ಪ @ ಸಿದ್ದಣ್ಣ ತಂದೆ ಭಾಗಣ್ಣ ದೊಡ್ಡಮನಿ ಎನ್ನುವವರ ಬೆರಳು ಮುದ್ರೆಗಳ ಜೊತೆ ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಕೋರಲಾಗಿತ್ತು ಎಂದು ಹಾಗೂ ನಿಪಿ-8 ಮತ್ತು 19ರಲ್ಲಿ ಇದ್ದ ಕ್ಯೂ-3, 4, ಆರ್-3 ಮತ್ತು 4 ಎನ್ನುವ ವಿವಾದಿತ ಬೆರಳು ಮುದ್ರೆಗಳನ್ನು ತಾನು ಕ್ರಮವಾಗಿ ಡಿ-1, ಡಿ-2, ಕ್ಯೂ-1 ಮತ್ತು 2 ಎಂದು ಗುರುತಿಸಿಕೊಂಡಿರುವುದಾಗಿ ಹಾಗೂ ಅದೇ ರೀತಿ ನಿಪಿ-51 ರಿಂದ 59ರ ಒಪ್ಪಿತ ಬೆರಳು ಮುದ್ರೆ ಪ್ರಪತ್ರದಲ್ಲಿರುವ ಎಸ್-1 ರಿಂದ 9ರಲ್ಲಿರುವ ಬೆರಳು ಮುದ್ರೆಗಳ ಪೈಕಿ ಪ್ರತಿಯೊಬ್ಬರ ಎಡಗೈ ಹೆಬ್ಬೆರಳಿನ ಮಾದರಿಯಾಗಿ ಪರೀಕ್ಷಗೆ ಆಯ್ಕೆ ಮಾಡಿ ಅವುಗಳನ್ನು ಎ-1 ರಿಂದ 3 ಎಂದು ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **11:** ಫ್ರಾಸಾ-**23** ಶರಣಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ವಿವಾದಿತ ಮತ್ತು ಒಪ್ಪಿತ ಬೆರಳು ಮುದ್ರೆಗಳನ್ನು Galton ವಿಧಾನದ ಮೂಲಕ ಪರೀಕ್ಷೆ ಮಾಡಿ ಡಿ-1 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಎ-3 ಎಂದು ಗುರತಿಸಿದ ಒಪ್ಪಿತ ಬೆರಳು ಮುದ್ರೆಗೆ ಹೊಂದಾಣಿಕೆಯಾಗಿರುತ್ತದೆಂದು ಹಾಗೂ ಕ್ಯೂ-1 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಎ-1 ಎಂದು ಗುರುತಿಸಿದ ಒಪ್ಪಿತ ಬೆರಳು ಮುದ್ರೆಗೆ ಹೊಂದಾಣಿಕೆಯಾಗುತ್ತದೆ ಎಂದು ಡಿ-1 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಕ್ಯೂ-1 ಎಂದು ಗುರುತಿಸಿದ ಒಪ್ಪಿತ ಬೆರಳು ಮುದ್ರಯೊಂದಿಗೆ ಮತ್ತು ಎ-1 ಮತ್ತು 2 ಎಂದು ಗುರುತಿಸಿರುವ ಒಪ್ಪಿತ ಬೆರಳು ಮುದ್ರೆಗಳೊಂದಿಗೆ ಹೊಂದಾಣಿಕೆಯಾಗಿರುವುದಿಲ್ಲವೆಂದು ಹಾಗೂ ಡಿ-2 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಡಿ-1 ಎಂದು ಗುರತಿಸಿರುವ ವಿವಾದಿತ ಬೆರಳು ಮುದ್ರೆಗಳೊಂದಿಗೆ ಮತ್ತು ಕ್ಯೂ-1 ಎಂದು ಗುರತಿಸಿರುವ ವಿವಾದಿತ ಬೆರಳು ಮುದ್ರೆಯೊಂದಿಗೆ ಹಾಗೂ ಎ-1, 2 ಮತ್ತು 3 ಒಪ್ಪಿತ ಬೆರಳು ಮುದ್ರೆಯೊಂದಿಗೆ ಹೊಂದಾಣಿಕೆಯಾಗಿರುವುದಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ **12:** ಪ್ರಾಸಾ-**23** ಶರಣಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಕ್ಯೂ-2 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಅಸ್ಪಷ್ಟ ಮತ್ತು ಅಪೂರ್ಣವಾಗಿದ್ದರಿಂದ ಅದನ್ನು ಪರೀಕ್ಷೆಗೆ ಅನರ್ಹವೆಂದು ಪರಿಗಣಿಸಿರುತ್ತೇನೆಂದು ಹಾಗೂ ಈ ಬಗ್ಗೆ ತನ್ನ ಬೆರಳು ಮುದ್ರೆ ವರದಿಯಲ್ಲಿ ಅಭಿಪ್ರಾಯ ತಿಳಿಸಿರುವುದಾಗಿ ಹಾಗೂ ಬೆರಳು ಮುದ್ರೆ ವರದಿಯ ಜೊತೆಯಲ್ಲಿ ಸಲ್ಲಿಸಿರುವ ಬೆರಳು ಮುದ್ರೆಗಳ ವಿಸ್ತೃತ ಛಾಯಾ ಚಿತ್ರಗಳಲ್ಲಿ Galton ನಿಯಮಾನುಸಾರ 8 ರೇಖಾ ವೈಶಿಷ್ಟ್ಯಗಳನ್ನು ಗುರುತಿಸಿರುವುದಾಗಿ ಹಾಗೂ ಸದರಿ ಬೆರಳು ಮುದ್ರೆಗಳ ವಿಸ್ತೃತ ಛಾಯಾಚಿತ್ರಗಳನ್ನು ಅನುಬಂಧ-1 ಮತ್ತು ತನ್ನ ಅಭಿಪ್ರಾಯಕ್ಕೆ ಆಧಾರಗಳನ್ನು ಅನುಬಂಧ-2ರ ಪ್ರಕಾರ ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ **13:** ಪ್ರಾಸಾ-**24** ಲಕ್ಷ್ಮಣರಾವರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22-10-2009 ರಂದು ಪ್ರಕರಣದ ಕಡತವನ್ನು ಚಾಸಾ-27ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡು ಅದೇ ದಿನ ಗುಲಬರ್ಗಾದ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ 1 ನೇ ಆರೋಪಿ ಸಿದ್ದಪ್ಪರವರಿಂದ ಜಮೀನು ಆದೇಶದ ಪ್ರತಿಯನ್ನು ಸ್ವೀಕರಿಸಿರುತ್ತೇನೆಂದು ಹಾಗೂ ಆತನನ್ನು ತಾನು ವಿಚಾರಣೆಗೆ ಒಳಪಡಿಸಿದ್ದು 1 ನೇ ಆರೋಪಿ ಸಿದ್ದಪ್ಪನು ಅಪರಾಧ ಮಾಡಿದ ಬಗ್ಗೆ ತನ್ನ ಮುಂದೆ ಒಪ್ಪಿಕೊಂಡಿರುತ್ತಾನೆಂದು ಹಾಗೂ 1 ನೇ ಆರೋಪಿ ಸಿದ್ದಪ್ಪನು ಯೋಗ್ಯ ಜಾಮೀನು ನೀಡಿದ್ದರಿಂದ ಆತನನ್ನು ಜಿಲ್ಲಾ ಸತ್ರ ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆಂದು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ **14:** ಪ್ರಾಸಾ-**25** ಡಾಃ ಬಿ.ಎಸ್.ಸುಧಾಕರ್‌ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16-09-2009 ರಂದು ನಮ್ಮ ಠಾಣೆಯ ಆರಕ್ಷಕ ಪೆದೆಯಾದ ಭಾಗಣ್ಣ ಎನ್ನುವವರು ಮಾನ್ಯ ನ್ಯಾಯಾಲಯವು ಖಾಸಗಿ ಪ್ರಕರಣ ಸಂಖ್ಯೆ 06/2009ರಲ್ಲಿನ ಆದೇಶದ ಮೇರೆಗೆ ಹಾಜರುಮಾಡಿದ ಖಾಸಗಿ ಪಿರ್ಯಾದು ಪಡೆದು ತಮ್ಮ ಠಾಣಾ ಗುನ್ನೆ ನಂ.172/2009ರ ಪ್ರಕಾರ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಅವುಗಳನ್ನು ಮಾನ್ಯ ನ್ಯಾಯಾಧೀಶರಿಗೆ ಕಳುಹಿಸಿರುತ್ತೇನೆಂದು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆಂದು ಹಾಗೂ ತನಗೆ ವರ್ಗಾವಣೆಯಾದ ಕಾರಣ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-29 ರವರಿಗೆ ವಹಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ **15:** ಪ್ರಾಸಾ-**26** ರಾಣಪ್ಪರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 02-06-2012 ರಂದು ಪ್ರಕರಣದ ಕಡತವನ್ನು ಚಾಸಾ-29ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡು ದಿನಾಂಕ 04-06-2012 ರಂದು ಬೆಂಗಳೂರಿನ ವಿಧಿವಿಜ್ಞಾನ ಕೇಂದ್ರದಿಂದ ಬೆರಳು ಮುದ್ರೆ ವರದಿಯು ತಯಾರಾಗಿದೆ ಎಂದು ಇ-ಮೇಲ್ ಬಂದಿದ್ದರಿಂದ ಅದನ್ನು ತರುವಂತೆ ತಮ್ಮ ಠಾಣೆ ಮುಖ್ಯ ಪೇದೆ-17ರವರನ್ನು ಪತ್ರ ಮುಖಾಂತರ ಕಳುಹಿಸಿರುತ್ತೇನೆಂದು ಹಾಗೂ ದಿನಾಂಕ 17-07-2012 ರಂದು ತಮ್ಮ ಠಾಣಾ ಸಿಬ್ಬಂದಿ ನಿಪಿ-

50ರ ಜ್ಞಾಪನದ ಮುಖಾಂತರ ನಿಪಿ-60, 61, 62ನ್ನು ಸ್ವೀಕರಿಸಿರುತ್ತೇನೆಂದು ಹಾಗೂ ದಿನಾಂಕ 15-11-2012 ರಂದು ಬೆರಳು ಮುದ್ರೆ ಘಟಕದಿಂದ ಬೆರಳು ಮುದ್ರೆ ವರದಿಯನ್ನು ಸ್ವೀಕರಿಸಿರುತ್ತೇನೆಂದು ಹಾಗೂ ಮುಂದಿನ ತನಿಖೆಗಾಗಿ ಪ್ರಕರಣದ ಕಡತನ್ನು ಚಾಸಾ-31ರವರಿಗೆ ಹಸ್ತಾಂತರಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **16:** ಪ್ರಾಸಾ-**27** ಸುಧೀರಕುಮಾರರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18-03-2013 ರಂದು ಪ್ರಕರಣದ ಕಡತವನ್ನು ಚಾಸಾ-30ರವರಿಂದ ಪಡೆದು ಪ್ರಕರಣದಲ್ಲಿ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ತನಿಖೆ ಪೂರ್ಣಗೊಂಡು ಆರೋಪಿಗಳ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **17:** ಪ್ರಾಸಾ-**28** ಸಂಗಮೇಶರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03-1-2009 ರಂದು ಪ್ರಕರಣದ ಕಡತಗಳನ್ನು ಚಾಸಾ-28 ರವರಿಂದ ಪಡೆದು ದಿನಾಂಕ 03-11-2009 ರಂದು ಚಾಸಾ-1 ಮತ್ತು ಆರೋಪಿತರಿಗೆ ಸಂಬಂಧಿಸಿದ ಸ.ನಂ.299ರ 2 ಪಹಣಿ ಪತ್ರಿಕೆಗಳನ್ನು ಕಂದಾಯ ಇಲಾಖೆಯವರಿಂದ ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆಂದು ಹಾಗೂ ದಿನಾಂಕ 17-07-2010ರಂದು ಸ್ವಾಧೀನವಾದ ಭೂಮಿಗೆ ಸಂಬಂಧಿಸಿದಂತಹ ಪರಿಹಾರ ಪಡೆದ ಬಗ್ಗೆ ಭೂಸ್ವಾಧೀನಾಧಿಕಾರಿಗಳಿಂದ ದೃಢೀಕರಣ ಮತ್ತು ಭೂ ಪರಿಹಾರ ಪತ್ರವನ್ನು ಪಡೆದಿರುತ್ತೇನೆಂದು ಹಾಗೂ ದಿನಾಂಕ 19-07-2010ರಂದು ಜೇವರ್ಗಿಯ ತಹಸಿಲ್ದಾರ ಕಚೇರಿಯ ದ್ವಿತೀಯ ದರ್ಜೆ ಸಹಾಯಕನಾದ ಯಲ್ಲಪ್ಪ ತಂದೆ ಹಣಮಂತ ಪವಾರ ಎನ್ನುವವರು 1ನೇ ಆರೋಪಿಯು ಯೋಜನಾ ನಿರ್ರಾಶ್ರಿತರ ಪ್ರಮಾಣ ಪತ್ರ ಪಡೆಯಲು ಸಲ್ಲಿಸಿದ್ದ ಅರ್ಜಿ, 2ನೇ ಆರೋಪಿ ಗುರುಸ್ವಾಮಿರವರು ಸಲ್ಲಿಸಿದ ಕೈಬರಹದ ಮೂಲ ವರದಿ, 2ನೇ ಆರೋಪಿ ಗುರುಸ್ವಾಮಿ ಮಾಡಿದ ಕೈಬರಹದ ಮೂಲ ಪಂಚನಾಮೆ, 2ನೇ ಆರೋಪಿ ತಯಾರಿಸಿದ ಕೈ ಬರಹದ ವಂಶವೃಕ್ಷ, 1ನೇ ಆರೋಪಿ ಸಲ್ಲಿಸಿದ್ದ ಛಾಪಾ ಕಾಗಧ ಚಾಸಾ-12 ಸಲ್ಲಿಸಿದ್ದ ವರದಿ ಮತ್ತು 1ನೇ ಆರೋಪಿ ಪಡೆದಿದ್ದ ಯೋಜನಾ ನಿರ್ರಾಶ್ರಿತರ ಪ್ರಮಾಣ ಪತ್ರಗಳನ್ನು ಹಾಜರುಮಾಡಿರುತ್ತಾನೆಂದು ಹಾಗೂ ಅವುಗಳನ್ನು ಪಂಚರಾದ ಚಾಸಾ-2 ಮತ್ತು 3ರವರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **18:** ಪ್ರಾಸಾ-**28** ಸಂಗಮೇಶರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, 1ನೇ ಆರೋಪಿ ತಯಾರಿಸಿದ್ದ ಒಪ್ಪಿಗೆ ಪ್ರಮಾಣ ಪತ್ರ ಮತ್ತು ಚಾಸಾ-22 ರವರು ಚಾಸಾ-6 ಮತ್ತು 8ರವರಿಂದ ಪಡೆದಿದ್ದ ಹೇಳಿಕೆ ಪತ್ರಗಳನ್ನು ಯಲ್ಲಪ್ಪ ಹಣುಮಂತಪ್ಪ ಪವಾರ ಹಾಜರುಮಾಡಿದ್ದು ಅವುಗಳನ್ನು ಚಾಸಾ-2 ಮತ್ತು 3ರವರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇನೆಂದು ಹಾಗೂ ದಿನಾಂಕ 05-09-2010ರಂದು ಚಾಸಾ-6ರವರನ್ನು ಠಾಣೆಗೆ ಕರೆಯಿಸಿ ಪಂಚರಾದ ಚಾಸಾ-4 ಮತ್ತು 5ರವರ ಸಮಕ್ಷಮ ಚಾಸಾ-6 ರವರ ಬೆರಳು ಮುದ್ರೆಗಳನ್ನು ಜಪ್ತಿ ಪಂಚನಾಮೆಯಡಿ ಸಂಗ್ರಹಿಸಿರುತ್ತೇನಂದು ಹಾಗೂ ದಿನಾಂಕ 26-07-2010ರಂದು 1ನೇ ಆರೋಪಿಯನ್ನು ಠಾಣೆಗೆ ಕರೆಸಿ ಆತನ ರುಜುಗಳನ್ನು ಚಾಸಾ-4 ಮತ್ತು 5ರವರ ಸಮಕ್ಷಮ ಜಪ್ತಿ ಪಂಚನಾಮೆಯಡಿ

ಪಡೆದುಕೊಂಡಿರುತ್ತೇನೆಂದು ಹಾಗೂ ದಿನಾಂಕ 30-07-2010 ರಂದು 2 ನೇ ಆರೋಪಿಯನ್ನು ವಶಕ್ಕೆ ಪಡೆದು ಆತನ ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಂಡು ಅದೇ ದಿನ ಚಾಸಾ-4 ಮತ್ತು 5 ರವರ ಸಮಕ್ಷಮ ಆರೋಪಿಯ ಮಾದರಿ ಬರವಣಿಗೆ ಮತ್ತು ರುಜುಗಳನ್ನು ಜಪ್ತಿ ಪಂಚನಾಮೆಯಡಿ ಪಡೆದಿರುತ್ತೇನೆಂದು ಹಾಗೂ ಆತನನ್ನು ತಮ್ಮ ಸಿಬ್ಬಂದಿಗಳ ಮುಖಾಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲು ಕಳುಹಿಸಿರುತ್ತೇನೆಂದು ಹಾಗೂ ದಿನಾಂಕ 30-11-2010 ರಂದು 1 ನೇ ಆರೋಪಿಯನ್ನು ಠಾಣೆಗೆ ಕರೆಯಿಸಿ ಆತನ ಬೆರಳು ಮುದ್ರೆಯನ್ನು ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತಿ ಪಂಚನಾಮೆಯಡಿ ಪಡೆದುಕೊಂಡಿರುತ್ತೇನೆಂದು ಹಾಗೂ ತನ್ನ ವರ್ಗಾವಣೆಯಾದ ಕಾರಣ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-30 ರವರಿಗೆ ಹಸ್ತಾಂತರಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **19** ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ?

ಉ**:**

ಪ್ರಶ್ನೆಃ **20** ಈ ಪ್ರಕರಣದಲ್ಲಿ ಯಾವುದಾದರೂ ನಿಮ್ಮ ಪರ ದಾಖಲಾತಿಗಳನ್ನು ಹಾಜರುಪಡಿಸುತ್ತೀರ?

ಉಃ

ಪ್ರಶ್ನೆಃ **21** ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವದು ಇದೆಯಾ?

ಉ

(ಮೇಲಿನ ಆರೋಪಿ ಹೇಳಿಕೆಯನು ನನ್ನ ಸಮಕ್ಷಮ ನನ್ನಿಂದ ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಪ್ರಶ್ನೆಗಳನ್ನು ಓದಿ, ತಿಳಿಸಿ ಹೇಳಿದ್ದು, ಅವುಗಳನ್ನು ತಿಳಿದುಕೊಂಡು ಅವರು ಕೊಟ್ಟ ಉತ್ತರಗಳನ್ನು ಅವರಂತೆಯೇ ದಿನಾಂಕ 20-03-2024 ರಂದು ದಾಖಲಿಸಿಕೊಳ್ಳಲಾಗಿದೆ)

ಜೇವರ್ಗಿ
20-03-2024

**(ಸಂದೀಪ್.ಎ.ನಾಯಿಕ್)**
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ

ಆಪಾದಿತನ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ

ಸಿ.ಸಿ.ನಂಬರಃ **117/2018**

ಪಿರ್ಯಾದುದಾರರುಃ ರಾಜ್ಯದ ಪರ ಜೇವರ್ಗಿ ಠಾಣೆ

ವಿರುದ್ಧ

ಆರೋಪಿಃ 2. ಗುರುಸ್ವಾಮಿ ತಂದೆ ದೂಳಯ್ಯ ಹಿರೇಮಠ,
ವಯಸ್ಸುಃ 61 ವರ್ಷ, ಉಃ ನಿವೃತ್ತ ಆರ್.ಐ.
ವಾಸಃ ಅಖಂಡ ಹಳ್ಳಿ, ತಾಃ ಜೇವರ್ಗಿ, ಜಿಃ ಕಲಬುರಗಿ.
ಹಾಲಿ ವಸತಿಃ ಪ್ಲಾಟ್ ನಂ.158 ಬಿದ್ದಾಪೂರ ಕಾಲೋನಿ, ಗುಲಬರ್ಗಾ
(In CC No.117/2018)

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ **1:** ಈ ಮೊಕದ್ದಮೆಯಲ್ಲಿ ವಿಚಾರಣೆಯಾದ ಸಾಕ್ಷಿದಾರರ ಪ್ರಮಾಣ ಪೂರ್ವಕ ಸಾಕ್ಷ್ಯವನ್ನು ನೀವು ಕೇಳಿದ್ದೀರಾ?

ಉಃ

ಪ್ರಶ್ನೆಃ **2:** ಪ್ರಾಸಾ **15/17** ಖಾಜಾಪಟೇಲರವರು ತಮ್ಮ ಸಾಕ್ಷ್ಯದಲ್ಲಿ, 2 ನೇ ಆರೋಪಿ ಕಂದಾಯ ಇಲಾಖೆಯಲ್ಲಿ ಕಂದಾಯ ನಿರೀಕ್ಷಕರಿದ್ದರೆಂದು ಹಾಗೂ 1 ನೇ ಆರೋಪಿಗೆ ಯೋಜನಾ ನಿರಾಶ್ರಿತರು ಅಂತಾ ಪ್ರಮಾಣ ಪತ್ರ ನೀಡಿದ್ದರೆಂದು ಹಾಗೂ ಸದರಿ ಪ್ರಮಾಣ ಪತ್ರ ಪ್ರಶ್ನೆ ಮಾಡಿ ದಿನಾಂಕ19-07-2009 ರಂದು ತಹಸಿಲ್ದಾರರವರಿಗೆ ಒಂದು ಅರ್ಜಿ ಬಂದಿತ್ತು ಎಂದು ಹಾಗೂ ತಹಸಿಲ್ದಾರರವರು ಸದರಿ ಪ್ರಮಾಣ ಪತ್ರ ಕಾನೂನುಬದ್ಧವಾಗಿದೆಯೇ ಎಂದು ಪರಿಶೀಲಿಸಿ ವರದಿ ನೀಡುವಂತೆ ನನಗೆ ಆದೇಶ ಮಾಡಿದ್ದರೆಂದು ಹಾಗೂ ದಿನಾಂಕ 18-08-2009 ರಂದು ಕೋಳಕೂರು ಗ್ರಾಮದ ಲೆಕ್ಕಾಧಿಕಾರಿ ಹಾಗೂ ತಾನು ಕೋಳಕೂರು ಗ್ರಾಮಕ್ಕೆ ಭೇಟಿ ನೀಡಿ ಪಂಚರನ್ನು ಬರಮಾಡಿಕೊಂಡು ಅವರಿಗೆ ವಿಷಯ ತಿಳಿಸಿ ಕೋಳಕೂರು ಗ್ರಾಮದ ಸ.ನಂ.299 ಕ್ಕೆ ಭೇಟಿ ನೀಡಿ ಪಂಚರಿಗೆ ಮತ್ತು ಅರ್ಜಿ ಕೊಟ್ಟ ಭಾಗಣ್ಣ ದೊಡ್ಮನಿ ಇವರನ್ನು ವಿಚಾರಣೆಗೆ ಬರಮಾಡಿ ಪಂಚರಾದ ಮುತ್ತಪ್ಪ, ಮರೆಪ್ಪ ಹಾಗೂ ಇನ್ನೊಬ್ಬರ ಹೇಳಿಕೆ ಪಡೆದುಕೊಂಡೆವು ಎಂದು ಹಾಗೂ ಅದೇ ಸಮಯದಲ್ಲಿ ಕೋಳಕೂರು ಗ್ರಾಮದ ಗ್ರಾಮ ಲೆಕ್ಕಾಧಿಕಾರಿ ಮತ್ತು ಪಂಚರಾದ ನಿಂಗಣ್ಣ ಬಸಲಿಂಗಪ್ಪ ಇದ್ದರು ಹಾಗೂ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ**?**

ಉಃ

ಪ್ರಶ್ನೆಃ **3:** ಪ್ರಾಸಾ **16/18** ರೇವಣಸಿದ್ದಪ್ಪರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಸಿದ್ದಪ್ಪ ತಮ್ಮ ಉಪವಿಭಾಗದಲ್ಲಿ ಕಿರಿಯ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸಿದ್ದನೆಂದು ಹಾಗೂ ಜೇವರ್ಗಿ ಪೊಲೀಸರು ಆರೋಪಿ ಸಿದ್ದಪ್ಪನ ನೇಮಕಾತಿಯ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಕೊಡುವಂತೆ ಕೋರಿದ್ದ ಮೇರೆಗೆ ತಾನು ಸಿದ್ದಪ್ಪರರ ನೇಮಕಾತಿ ಆದೇಶದ ದೃಢೀಕೃತ ಪ್ರತಿಯನ್ನು ಮತ್ತು ರಿಪೋಸ್ಟಿಂಗ್ ಆದ ಆದೇಶದ ಪ್ರತಿಯನ್ನು ಮತ್ತು ಆತನ

ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿಯನ್ನು ನೀಡಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ**?**

ಉಃ

ಪ್ರಶ್ನೆಃ **4:** ಫ್ರಾಸಾ **17/19** ದೌಲತಗೌಡರವರು ತಮ್ಮ ಸಾಕ್ಷ್ಯದಲ್ಲಿ ಜೇವರ್ಗಿಯ ಆರಕ್ಷಕ ಉಪನಿರೀಕ್ಷಕರ ಕೋರಿಕೆಯ ಮೇರೆಗೆ ದಿನಾಂಕ 13–04–2010 ರಂದು ಸಿದ್ದಣ್ಣ ತಂದೆ ಭಾಗಣ್ಣ ಸಾಃ ಕೋಳಕೂರು ಇವರಿಗೆ ಸಂಬಂದಿಸಿದಂತೆ ಇರುವ 10 ಮೂಲ ದಾಖಲೆಗಳನ್ನು ಕವರಿಂಗ್ ಲೆಟರಿನೊಂದಿಗೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **5:** ಫ್ರಾಸಾ **18/20** ಶಂಕರಪ್ಪರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20-08-2010 ಂರದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವೊಂದು ದಾಖಲೆಗಳನ್ನು ಸೀಲಾದ ಲಕೋಟೆಯಲ್ಲಿ ಪೊಲೀಸ್ ಮುಖ್ಯ ಪೇದೆ-489 ರವರ ಮುಖಾಂತರ ಸಂಬಂಧಪಟ್ಟ ಕೋರಿಕೆಯು ಪತ್ರದೊಂದಿಗೆ ತನಿಖಾಧಿಕಾರಿಗಳು ಪರೀಕ್ಷೆಗಾಗಿ ಕಳುಹಿಸಿದ್ದರೆಂದು ಹಾಗೂ ಕಳುಹಿಸಿದಂತಹ ದಾಖಲೆಗಳಲ್ಲಿ ವಿವಾದಿತ ಸಹಿಗಳುಳ್ಳ ಯೋಜನಾ ನಿರ್ರಾಶ್ರಿತರ ಪ್ರಮಾಣ ಪತ್ರ, ಒಂದು ಅಫಿಡವಿಟ್ ಮತ್ತು ಫಾರಂ ನಂ.3, ಇನ್ನೊಂದು ವಿವಾದಿತ ದಾಖಲೆ ತಹಸಿಲ್ದಾರ ಜೇವರ್ಗಿರವರಿಗೆ ನಮೂದಾಗಿದ್ದು, ಪಂಚನಾಮೆ ಪತ್ರ, ವಂಶಾವಳಿ ದಾಖಲೆಗಳೊಂದಿಗೆ ಸಿದ್ದಪ್ಪ ದೊಡ್ಡಮನಿರವರ ಮಾದರಿ ಸಹಿಗಳನ್ನು ಹಾಗೂ ತನಿಖಾಧಿಕಾರಿ ಗುರುಸ್ವಾಮಿರವರ ಬರಹ ಸಹಿಗಳನ್ನು ಎರಡು ಹಾಳೆಗಳಲ್ಲಿ ಕಳಹಿಸಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**ಉಃ**

ಪ್ರಶ್ನೆಃ **6:** ಫ್ರಾಸಾ **18/20** ಶಂಕರಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ತನಿಖಾಧಿಕಾರಿಗಳು ಮಾರಪ್ಪ ಮತ್ತು ಮುತ್ತಣ್ಣರವರ ಸಹಿಗಳುಳ್ಳ ಮಾದರಿ ಸಹಿಗಳನ್ನು ಸ್ಟೇಟಮೆಂಟ್ ದಿನಾಂಕ 18-08-2009 ರಂದು ವೈಜ್ಞಾನಿಕ ಪರೀಕ್ಷೆಗಾಗಿ ಕಳುಹಿಸಿದ್ದರೆಂದು ಸದರಿ ದಾಖಲೆಗಳಲ್ಲಿಯ ಬರಹ ಸಹಿಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ತಾನು ಅಭಿಪ್ರಾಯ ಪತ್ರವನ್ನು ನೀಡಿದ್ದೇನೆಂದು ಹಾಗೂ ಅವರ ಅಭಿಪ್ರಾಯದಲ್ಲಿ ಮಾದರಿ ಸಹಿ ಆರ್-1 (ಮಾರಪ್ಪ)ಗಳನ್ನು ಬರೆದ ವ್ಯಕ್ತಿ ವಿವಾದಿತ ಸಹಿ ಕ್ಯೂ-1 ನ್ನು ಬರೆದಿರುವುದಿಲ್ಲವೆಂದು ಹಾಗೂ ಮಾದರಿ ಸಹಿ ಆರ್-2 (ಮುತ್ತಪ್ಪ) ಗಳನ್ನು ಬರೆದ ವ್ಯಕ್ತಿ ವಿವಾದಿತ ಸಹಿ ಕ್ಯೂ-2 ನ್ನು ಬರೆದಿರುವುದಿಲ್ಲವೆಂದು ಹಾಗೂ ಮಾದರಿ ಸಹಿಗಳಾದ ಎಸ್-7 ರಿಂದ ಎಸ್.-9 ಗಳನ್ನು ಬರೆದ ವ್ಯಕ್ತಿಯ ವಿವಾದಿತ ಸಹಿಗಳಾದ ಪಿ-1, ಪಿ-1(ಎ) ಪಿ-1(ಬಿ) ಬರೆದಿರುತ್ತಾರೆಂದು ಹಾಗೂ (ಸಿದ್ದಪ್ಪ) ಮಾದರಿ ಬರಹ ಸಹಿಗಳಾದ ಎಸ್-10, ಎಸ್.-10(ಎ), ಎಸ್-11 ರಿಂದ 13 ಗಳನ್ನು ಬರೆದಿರುವ ವ್ಯಕ್ತಿಯೇ ವಿವಾದಿತ ಬರಹ ಸಹಿಗಳಾದ ಪಿ-2 ರಿಂದ ಪಿ-4, ಪಿ-2(ಎ) ಯಿಂದ ಪಿ-4(ಎ) ಗಳನ್ನು ಬರೆದಿರುತ್ತಾರೆಂದು (ಗುರುಸ್ವಾಮಿ) ತಾನು ಮೇಲೆ ನೀಡಿದ ಅಭಿಪ್ರಾಯದಂತೆ ತಾನು ವರದಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **7:** ಪ್ರಾಸಾ **18/20** ಶಂಕರಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ತಾನು ನಿಪಿ-25 ರಲ್ಲಿ ನೀಡಿದ ಅಭಿಪ್ರಾಯಗಳಿಗೆ ಕಾರಣಗಳನ್ನು ಐದು ಪುಟಗಳಲ್ಲಿ ಹಾಗೂ ಛಾಯಾಚಿತ್ರದ ಪ್ರತಿಗಳನ್ನು ನಿಪಿ-25 ರೊಂದಿಗೆ ಹಾಗೂ ಸೀಲಾದ ಲಕೋಟೆಯಲ್ಲಿ ತನ್ನ ಕಚೇರಿಯ ಮಾದರಿ ಮೊಹರಿನೊಂದಿಗೆ ಕಳುಹಿಸಿಕೊಟ್ಟಿದ್ದೇನೆಂದು ಹಾಗೂ ನಿಪಿ-32 ರ ಮೇಲೆ ಸಿದ್ದಪ್ಪ ತಂದೆ ಭಾಗಣ್ಣರವರ ಸಹಿ ಇರುತ್ತದೇಂದು ಹಾಗೂ ನಿಪಿ-33 ರಿಂದ 35 ರ ಮೇಲೆ ಕಂದಾಯ ನಿರೀಕ್ಷಕರ ಹಾಗೂ ಕ್ಯೂ-1 ಮತ್ತು 2 ಎಂದು ಗುರುತಿಸಿರುವ ನಿಪಿ-34 ರ ದಾಖಲೆಯ ಮೇಲೆ ಕಂದಾಯ ನಿರೀಕ್ಷಕರು ಮತ್ತು ಪಂಚರ ಸಹಿಗಳು ಇರುತ್ತವೆಂದು ಹಾಗೂ ನಿಪಿ-36 ರ ಮೇಲೆ ಸಿದ್ದಪ್ಪ ತಂದೆ ಭಾಗಣ್ಣರವರ ಸಹಿ ಇರುತ್ತದೆಂದು ಹಾಗೂ ನಿಪಿ-18 ರ ಮೇಲೆ ಮರೆಪ್ಪ ಮತ್ತು ಮುತ್ತಪ್ಪರವರ ಹೇಳಿಕೆ ಪತ್ರದಲ್ಲಿಯ ಸಹಿಗಳಾಗಿವೆ ಎಂದು, ನಿಪಿ-38 ರ ದಾಖಲೆಯ ಮೇಲೆ ನಿವೃತ್ತ ಗುರುಸ್ವಾಮಿರವರ ಸಹಿ ಬರಹಗಳಿವೆ ಎಂದು ಹಾಗೂ ನಿಪಿ-39 ದಾಖಲೆಯ ಮೇಲೆ ಗುರುಸ್ವಾಮಿರವರ ಮಾದರಿ ಸಹಿಗಳಿವೆಯೆಂದು ಹಾಗೂ ನಿಪಿ-40 ರ ಮೇಲೆ ಸಿದ್ದಪ್ಪ @ ಸಿದ್ದಣ್ಣ ಭಾಗಣ್ಣ ದೊಡ್ಡಮನಿ ಸಾಃ ಕೋಳಕೂರರವರ ಸಹಿಗಳಿವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **8:** ಪ್ರಾಸಾ **19** ಭಾಗಣ್ಣ ಸಾಯಬಣ್ಣ ದೊಡ್ಡಮನಿರವರು ತಮ್ಮ ಸಾಕ್ಷ್ಯದಲ್ಲಿ, ತನಗೆ ಸೇರಿದ ಸ.ನಂ.299 ರ 5 ಎಕರೆ ವಿಸ್ತೀರ್ಣದ ಪೈಕಿ 00-24 ಗುಂಟೆ ಜಮೀನು ಕಾಲುವೆಗಾಗಿ ಭೂಸ್ವಾಧೀನವಾಗಿರುತ್ತದೆಂದು ಹಾಗೂ 1 ನೇ ಆರೋಪಿಯ ತಂದೆ ಹೆಸರು ನನ್ನ ಹೆಸರು ಒಂದೇ ಇರುತ್ತದೆಂದು ಹಾಗೂ ಅದನ್ನು 1 ನೇ ಆರೋಪಿ ದುರುಪಯೋಗ ಮಾಡಿಕೊಂಡು ಕಾಲುವೆಗೆ ಭೂಸ್ವಾಧೀನವಾಗಿರುವುದಕ್ಕೆ ಸಂಬಂಧಿಸಿದಂತೆ ನಿರಾಶ್ರಿತರ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆಂದು ಹಾಗೂ ಸದರಿ ನಿರಾಶ್ರಿತರ ಪ್ರಮಾಣ ಪತ್ರದ ಮೇರೆಗೆ 1 ನೇ ಆರೋಪಿ ನೌಕರಿ ಪಡೆದಿರುತ್ತಾನೆಂದು ಹಾಗೂ 1 ನೇ ಆರೋಪಿ ತನಗೆ ಸಂಬಂಧಿಕನಲ್ಲವೆಂದು ಹಾಗೂ ಆರೋಪಿಗಳ ಸರ್ವೆ ನಂಬರ್ 333 ಇರುತ್ತದೆಂದು ಹಾಗೂ 1 ನೇ ಆರೋಪಿಗೆ ಮತ್ತು ತನಗೆ ಸೇರಿದ ಸರ್ವೆ ನಂಬರ್ 299 ಕ್ಕೆ ಯಾವುದೇ ಸಂಬಂಧವಿರುವುದಿಲ್ಲವೆಂದು ಹಾಗೂ ಸದರಿ ಸಂಗತಿ ತನಗೆ ಗೊತ್ತಾದ ನಂತರ 1 ನೇ ಆರೋಪಿ ಮೋಸ ಮಾಡಿದ ಬಗ್ಗೆ ತಹಸಿಲ್ದಾರರವರಿಗೆ ಅರ್ಜಿ ಸಲ್ಲಿಸಿರುತ್ತೇನೆಂದು ಹಾಗೂ ಅದೇ ರೀತಿ ಪೊಲೀಸ್ ಠಾಣೆಗೆ ಹೋಗಿ ಅರ್ಜಿ ಕೊಟ್ಟಿರುತ್ತೇನೆಂದು ಹಾಗೂ ಪೊಲೀಸರು ಕೇಸು ತೆಗೆದುಕೊಂಡಿರುವುದಿಲ್ಲವೆಂದು ನಂತರ ವಕೀಲರ ಮುಖಾಂತರ ನ್ಯಾಯಾಲಯದಲ್ಲಿ ಪಿರ್ಯಾದು ಸಲ್ಲಿಸಿರುತ್ತೇನೆಂದು ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

**ಉಃ**

ಪ್ರಶ್ನೆಃ **9:** ಪ್ರಾಸಾ-**23** ಶರಣಪ್ಪರವರು ತಮ್ಮ ಸಾಕ್ಷ್ಯದಲ್ಲಿ, ಬೆಂಗಳೂರಿನ ಪೊಲೀಸ್ ಅಧೀಕ್ಷಕರ ಆದೇಶದ ಮೇರೆಗೆ ಜೇವರ್ಗಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 172/2009 ಕ್ಕೆ ಸಂಬಂಧಿಸಿದಂತೆ ಪ್ರಕರಣದಲ್ಲಿ ಒಪ್ಪಿತ ಮತ್ತು ವಿವಾದಿತ ಬೆರಳು ಮುದ್ರೆಗಳನ್ನು ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಆದೇಶ ಬಂದಿತ್ತು ಎಂದು ಹಾಗೂ ವಿವಾದಿತ ಬೆರಳು ಮುದ್ರೆಗಳನ್ನು ಬೆಂಗಳೂರು ಬೆರಳು ಮುದ್ರೆ ಸಂಗ್ರಹಾಲಯದಲ್ಲಿ ಛಾಯಾ ಚಿತ್ರ ಮಾಡಿಸಿರುತ್ತೇನೆಂದು ಹಾಗೂ ದಿನಾಂಕ 19-10-2011 ರಂದು ಪ್ರಕರಣದಲ್ಲಿನ ಒಪ್ಪಿತ ಮತ್ತು ವಿವಾದಿತ ಬೆರಳು ಮುದ್ರೆಗಳ ಛಾಯಾ ಚಿತ್ರಗಳನ್ನು ರಾಯಚೂರು ಘಟಕ ಸಿಬ್ಬಂದಿಗಳಿಂದ ಸ್ವೀಕರಿಸಿ ಪ್ರಕರಣದಲ್ಲಿರುವ

ದಾಖಲೆಗಳನ್ನು ಮತ್ತು ಅವುಗಳಲ್ಲಿರುವ ಒಪ್ಪಿತ ಮತ್ತು ವಿವಾದಿತ ಬೆರಳು ಮುದ್ರೆಗಳನ್ನು ಪರೀಕ್ಷಿಸಿ ಪೂರ್ಣಗೊಳಿಸಿ ಬೆರಳು ಮುದ್ರೆ ತಜ್ಞರ ಅಭಿಪ್ರಾಯದ ಪ್ರಮಾಣ ಪತ್ರ ನೀಡಿರುತ್ತೇನೆಂದು ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ: **10:** ಫ್ರಾಸಾ-**23** ಶರಣಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 29-03-2012 ರಂದು ತಜ್ಞರ ಅಭಿಪ್ರಾಯದ ವರದಿಯೊಂದಿಗೆ ಎಲ್ಲಾ ಮೂಲ ದಾಖಲಾತಿಗಳನ್ನು ಬೆಂಗಳೂರು ಬೆರಳು ಮುದ್ರೆ ಸಂಗ್ರಹಾಲಯಕ್ಕೆ ಸಲ್ಲಿಸಿರುತ್ತೇನೆಂದು ಹಾಗೂ ಬೆಂಗಳೂರು ಬೆರಳು ಮುದ್ರೆ ಸಂಗ್ರಹಾಲಯದ ಪೊಲೀಸ್ ಅಧೀಕ್ಷಕರು ತಮ್ಮ ಕಚೇರಿ ಮುಖಾಂತರ ತಜ್ಞರ ಅಭಿಪ್ರಾಯದ ವರದಿಯ ಜೊತೆಗೆ ಎಲ್ಲಾ ಮೂಲ ದಾಖಲೆಗಳನ್ನು ಜೇವರ್ಗಿಯ ಆರಕ್ಷಕ ಉಪ ನಿರೀಕ್ಷಕರಿಗೆ ರವಾನಿಸಿರುತ್ತೇನೆಂದು ಹಾಗೂ ಕ್ಯೂ-3, 4 ಮತ್ತು ಆರ್-3 ಮತ್ತು 4 ವಿವಾದಿತ ಬೆರಳು ಮುದ್ರೆಗಳನ್ನು 9 ಬೆರಳು ಮುದ್ರಾ ಪತ್ರದಲ್ಲಿ ಪಡೆದಿದೆ ಎನ್ನಲಾದ ಬಸ್ಸಣ್ಣ ತಂದೆ ಸಾಯಬಣ್ಣ, ಮಹಾದೇವ ತಂದೆ ಸಾಯಬಣ್ಣ ಮತ್ತು ಸಿದ್ದಪ್ಪ @ ಸಿದ್ದಣ್ಣ ತಂದೆ ಭಾಗಣ್ಣ ದೊಡ್ಡಮನಿ ಎನ್ನುವವರ ಬೆರಳು ಮುದ್ರೆಗಳ ಜೊತೆ ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಕೋರಲಾಗಿತ್ತು ಎಂದು ಹಾಗೂ ನಿಪಿ-8 ಮತ್ತು 19ರಲ್ಲಿ ಇದ್ದ ಕ್ಯೂ-3, 4, ಆರ್-3 ಮತ್ತು 4 ಎನ್ನುವ ವಿವಾದಿತ ಬೆರಳು ಮುದ್ರೆಗಳನ್ನು ತಾನು ಕ್ರಮವಾಗಿ ಡಿ-1, ಡಿ-2, ಕ್ಯೂ-1 ಮತ್ತು 2 ಎಂದು ಗುರುತಿಸಿಕೊಂಡಿರುವುದಾಗಿ ಹಾಗೂ ಅದೇ ರೀತಿ ನಿಪಿ-51 ರಿಂದ 59ರ ಒಪ್ಪಿತ ಬೆರಳು ಮುದ್ರೆ ಪ್ರಪತ್ರದಲ್ಲಿರುವ ಎಸ್-1 ರಿಂದ 9ರಲ್ಲಿರುವ ಬೆರಳು ಮುದ್ರೆಗಳ ಪೈಕಿ ಪ್ರತಿಯೊಬ್ಬರ ಎಡಗೈ ಹೆಬ್ಬೆರಳಿನ ಮಾದರಿಯಾಗಿ ಪರೀಕ್ಷಗೆ ಆಯ್ಕೆ ಮಾಡಿ ಅವುಗಳನ್ನು ಎ-1 ರಿಂದ 3 ಎಂದು ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ: **11:** ಫ್ರಾಸಾ-**23** ಶರಣಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ವಿವಾದಿತ ಮತ್ತು ಒಪ್ಪಿತ ಬೆರಳು ಮುದ್ರೆಗಳನ್ನು Galton ವಿಧಾನದ ಮೂಲಕ ಪರೀಕ್ಷೆ ಮಾಡಿ ಡಿ-1 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಎ-3 ಎಂದು ಗುರತಿಸಿದ ಒಪ್ಪಿತ ಬೆರಳು ಮುದ್ರೆಗೆ ಹೊಂದಾಣಿಕೆಯಾಗಿರುತ್ತದೆಂದು ಹಾಗೂ ಕ್ಯೂ-1 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಎ-1 ಎಂದು ಗುರುತಿಸಿದ ಒಪ್ಪಿತ ಬೆರಳು ಮುದ್ರೆಗೆ ಹೊಂದಾಣಿಕೆಯಾಗುತ್ತದೆ ಎಂದು ಡಿ-1 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಕ್ಯೂ-1 ಎಂದು ಗುರುತಿಸಿದ ಒಪ್ಪಿತ ಬೆರಳು ಮುದ್ರಯೊಂದಿಗೆ ಮತ್ತು ಎ-1 ಮತ್ತು 2 ಎಂದು ಗುರುತಿಸಿರುವ ಒಪ್ಪಿತ ಬೆರಳು ಮುದ್ರೆಗಳೊಂದಿಗೆ ಹೊಂದಾಣಿಕೆಯಾಗಿರುವುದಿಲ್ಲವೆಂದು ಹಾಗೂ ಡಿ-2 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಡಿ-1 ಎಂದು ಗುುರತಿಸಿರುವ ವಿವಾದಿತ ಬೆರಳು ಮುದ್ರೆಗಳೊಂದಿಗೆ ಮತ್ತು ಕ್ಯೂ-1 ಎಂದು ಗುರತಿಸಿರುವ ವಿವಾದಿತ ಬೆರಳು ಮುದ್ರೆಯೊಂದಿಗೆ ಹಾಗೂ ಎ-1, 2 ಮತ್ತು 3 ಒಪ್ಪಿತ ಬೆರಳು ಮುದ್ರೆಯೊಂದಿಗೆ ಹೊಂದಾಣಿಕೆಯಾಗಿರುವುದಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ: **12:** ಫ್ರಾಸಾ-**23** ಶರಣಪ್ಪರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಕ್ಯೂ-2 ಎಂದು ಗುರುತಿಸಿರುವ ವಿವಾದಿತ ಬೆರಳು ಮುದ್ರೆಯು ಅಸ್ಪಷ್ಟ ಮತ್ತು ಅಪೂರ್ಣವಾಗಿದ್ದರಿಂದ ಅದನ್ನು ಪರೀಕ್ಷೆಗೆ ಅನರ್ಹವೆಂದು ಪರಿಗಣಿಸಿರುತ್ತೇನೆಂದು ಹಾಗೂ ಈ ಬಗ್ಗೆ ತನ್ನ ಬೆರಳು ಮುದ್ರೆ ವರದಿಯಲ್ಲಿ ಅಭಿಪ್ರಾಯ ತಿಳಿಸಿರುವುದಾಗಿ ಹಾಗೂ ಬೆರಳು ಮುದ್ರೆ ವರದಿಯ ಜೊತೆಯಲ್ಲಿ ಸಲ್ಲಿಸಿರುವ ಬೆರಳು ಮುದ್ರೆಗಳ ವಿಸ್ತೃತ ಛಾಯಾ ಚಿತ್ರಗಳಲ್ಲಿ Galton ನಿಯಮಾನುಸಾರ 8 ರೇಖಾ ವೈಶಿಷ್ಟ್ಯಗಳನ್ನು ಗುರುತಿಸಿರುವುದಾಗಿ ಹಾಗೂ ಸದರಿ ಬೆರಳು ಮುದ್ರೆಗಳ ವಿಸ್ತೃತ ಛಾಯಾಚಿತ್ರಗಳನ್ನು ಅನುಬಂಧ-1 ಮತ್ತು ತನ್ನ ಅಭಿಪ್ರಾಯಕ್ಕೆ ಆಧಾರಗಳನ್ನು ಅನುಬಂಧ-2 ರ ಪ್ರಕಾರ ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ: **13:** ಫ್ರಾಸಾ-**24** ಲಕ್ಷ್ಮಣರಾವರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22-10-2009 ರಂದು ಪ್ರಕರಣದ ಕಡತವನ್ನು ಚಾಸಾ-27 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡು ಅದೇ ದಿನ ಗುಲಬರ್ಗಾದ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ 1 ನೇ ಆರೋಪಿ ಸಿದ್ದಪ್ಪರವರಿಂದ ಜಮೀನು ಆದೇಶದ ಪ್ರತಿಯನ್ನು ಸ್ವೀಕರಿಸಿರುತ್ತೇನೆಂದು ಹಾಗೂ ಆತನನ್ನು ತಾನು ವಿಚಾರಣೆಗೆ ಒಳಪಡಿಸಿದ್ದು 1 ನೇ ಆರೋಪಿ ಸಿದ್ದಪ್ಪನು ಅಪರಾಧ ಮಾಡಿದ ಬಗ್ಗೆ ತನ್ನ ಮುಂದೆ ಒಪ್ಪಿಕೊಂಡಿರುತ್ತಾನೆಂದು ಹಾಗೂ 1 ನೇ ಆರೋಪಿ ಸಿದ್ದಪ್ಪನು ಯೋಗ್ಯ ಜಾಮೀನು ನೀಡಿದ್ದರಿಂದ ಆತನನ್ನು ಜಿಲ್ಲಾ ಸತ್ರ ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆಂದು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ: **14:** ಫ್ರಾಸಾ-**25** ಡಾಃ ಬಿ.ಎಸ್.ಸುಧಾಕರ್‌ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16-09-2009 ರಂದು ನಮ್ಮ ಠಾಣೆಯ ಆರಕ್ಷಕ ಪೆದೆಯಾದ ಭಾಗಣ್ಣ ಎನ್ನುವವರು ಮಾನ್ಯ ನ್ಯಾಯಾಲಯವು ಖಾಸಗಿ ಪ್ರಕರಣ ಸಂಖ್ಯೆ 06/2009 ರಲ್ಲಿನ ಆದೇಶದ ಮೇರೆಗೆ ಹಾಜರುಮಾಡಿದ ಖಾಸಗಿ ಪಿರ್ಯಾದು ಪಡೆದು ತಮ್ಮ ಠಾಣಾ ಗುನ್ನೆ ನಂ.172/2009 ರ ಪ್ರಕಾರ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಅವುಗಳನ್ನು ಮಾನ್ಯ ನ್ಯಾಯಾಧೀಶರಿಗೆ ಕಳುಹಿಸಿರುತ್ತೇನೆಂದು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆಂದು ಹಾಗೂ ತನಗೆ ವರ್ಗಾವಣೆಯಾದ ಕಾರಣ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-29 ರವರಿಗೆ ವಹಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆ: **15:** ಫ್ರಾಸಾ-**26** ರಾಣಪ್ಪರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 02-06-2012 ರಂದು ಪ್ರಕರಣದ ಕಡತವನ್ನು ಚಾಸಾ-29 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡು ದಿನಾಂಕ 04-06-2012 ರಂದು ಬೆಂಗಳೂರಿನ ವಿಧಿವಿಜ್ಞಾನ ಕೇಂದ್ರದಿಂದ ಬೆರಳು ಮುದ್ರೆ ವರದಿಯು ತಯಾರಾಗಿದೆ ಎಂದು ಇ-ಮೇಲ್ ಬಂದಿದ್ದರಿಂದ ಅದನ್ನು ತರುವಂತೆ ತಮ್ಮ ಠಾಣೆ ಮುಖ್ಯ ಪೇದೆ-17 ರವರನ್ನು ಪತ್ರ ಮುಖಾಂತರ ಕಳುಹಿಸಿರುತ್ತೇನೆಂದು ಹಾಗೂ ದಿನಾಂಕ 17-07-2012 ರಂದು ತಮ್ಮ ಠಾಣಾ ಸಿಬ್ಬಂದಿ ನಿಪಿ-

50ರ ಜ್ಞಾಪನದ ಮುಖಾಂತರ ನಿಪಿ-60, 61, 62ನ್ನು ಸ್ವೀಕರಿಸಿರುತ್ತೇನೆಂದು ಹಾಗೂ ದಿನಾಂಕ 15-11-2012 ರಂದು ಬೆರಳು ಮುದ್ರೆ ಘಟಕದಿಂದ ಬೆರಳು ಮುದ್ರೆ ವರದಿಯನ್ನು ಸ್ವೀಕರಿಸಿರುತ್ತೇನೆಂದು ಹಾಗೂ ಮುಂದಿನ ತನಿಖೆಗಾಗಿ ಪ್ರಕರಣದ ಕಡತನ್ನು ಚಾಸಾ-31ರವರಿಗೆ ಹಸ್ತಾಂತರಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ**?**

ಉಃ

ಪ್ರಶ್ನೆಃ **16:** ಫ್ರಾಸಾ**-27** ಸುಧೀರಕುಮಾರರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18-03-2013 ರಂದು ಪ್ರಕರಣದ ಕಡತವನ್ನು ಚಾಸಾ-30ರವರಿಂದ ಪಡೆದು ಪ್ರಕರಣದಲ್ಲಿ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ತನಿಖೆ ಪೂರ್ಣಗೊಂಡು ಆರೋಪಿಗಳ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ**?**

ಉಃ

ಪ್ರಶ್ನೆಃ **17:** ಫ್ರಾಸಾ**-28** ಸಂಗಮೇಶರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03-1-2009 ರಂದು ಪ್ರಕರಣದ ಕಡತಗಳನ್ನು ಚಾಸಾ-28 ರವರಿಂದ ಪಡೆದು ದಿನಾಂಕ 03-11-2009 ರಂದು ಚಾಸಾ-1 ಮತ್ತು ಆರೋಪಿತರಿಗೆ ಸಂಬಂಧಿಸಿದ ಸ.ನಂ.299ರ 2 ಪಹಣಿ ಪತ್ರಿಕೆಗಳನ್ನು ಕಂದಾಯ ಇಲಾಖೆಯವರಿಂದ ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆಂದು ಹಾಗೂ ದಿನಾಂಕ 17-07-2010ರಂದು ಸ್ವಾಧೀನವಾದ ಭೂಮಿಗೆ ಸಂಬಂಧಿಸಿದಂತಹ ಪರಿಹಾರ ಪಡೆದ ಬಗ್ಗೆ ಭೂಸ್ವಾಧೀನಾಧಿಕಾರಿಗಳಿಂದ ದೃಢೀಕರಣ ಮತ್ತು ಭೂ ಪರಿಹಾರ ಪತ್ರವನ್ನು ಪಡೆದಿರುತ್ತೇನೆಂದು ಹಾಗೂ ದಿನಾಂಕ 19-07-2010ರಂದು ಜೇವರ್ಗಿಯ ತಹಸಿಲ್ದಾರ ಕಚೇರಿಯ ದ್ವಿತೀಯ ದರ್ಜೆ ಸಹಾಯಕನಾದ ಯಲ್ಲಪ್ಪ ತಂದೆ ಹಣಮಂತ ಪವಾರ ಎನ್ನುವವರು 1ನೇ ಆರೋಪಿಯು ಯೋಜನಾ ನಿರ್ರಾಶ್ರಿತರ ಪ್ರಮಾಣ ಪತ್ರ ಪಡೆಯಲು ಸಲ್ಲಿಸಿದ್ದ ಅರ್ಜಿ, 2ನೇ ಆರೋಪಿ ಗುರುಸ್ವಾಮಿರವರು ಸಲ್ಲಿಸಿದ ಕೈಬರಹದ ಮೂಲ ವರದಿ, 2ನೇ ಆರೋಪಿ ಗುರುಸ್ವಾಮಿ ಮಾಡಿದ ಕೈಬರಹದ ಮೂಲ ಪಂಚನಾಮೆ, 2ನೇ ಆರೋಪಿ ತಯಾರಿಸಿದ ಕೈ ಬರಹದ ವಂಶವೃಕ್ಷ, 1ನೇ ಆರೋಪಿ ಸಲ್ಲಿಸಿದ್ದ ಛಾಪಾ ಕಾಗಧ ಚಾಸಾ-12 ಸಲ್ಲಿಸಿದ್ದ ವರದಿ ಮತ್ತು 1ನೇ ಆರೋಪಿ ಪಡೆದಿದ್ದ ಯೋಜನಾ ನಿರ್ರಾಶ್ರಿತರ ಪ್ರಮಾಣ ಪತ್ರಗಳನ್ನು ಹಾಜರುಮಾಡಿರುತ್ತಾನೆಂದು ಹಾಗೂ ಅವುಗಳನ್ನು ಪಂಚರಾದ ಚಾಸಾ-2 ಮತ್ತು 3ರವರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ**?**

ಉಃ

ಪ್ರಶ್ನೆಃ **18:** ಫ್ರಾಸಾ**-28** ಸಂಗಮೇಶರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, 1ನೇ ಆರೋಪಿ ತಯಾರಿಸಿದ್ದ ಒಪ್ಪಿಗೆ ಪ್ರಮಾಣ ಪತ್ರ ಮತ್ತು ಚಾಸಾ-22 ರವರು ಚಾಸಾ-6 ಮತ್ತು 8ರವರಿಂದ ಪಡೆದಿದ್ದ ಹೇಳಿಕೆ ಪತ್ರಗಳನ್ನು ಯಲ್ಲಪ್ಪ ಹಣುಮಂತಪ್ಪ ಪವಾರ ಹಾಜರುಮಾಡಿದ್ದು ಅವುಗಳನ್ನು ಚಾಸಾ-2 ಮತ್ತು 3ರವರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತೇನೆಂದು ಹಾಗೂ ದಿನಾಂಕ 05-09-2010ರಂದು ಚಾಸಾ-6ರವರನ್ನು ಠಾಣೆಗೆ ಕರೆಯಿಸಿ ಪಂಚರಾದ ಚಾಸಾ-4 ಮತ್ತು 5ರವರ ಸಮಕ್ಷಮ ಚಾಸಾ-6 ರವರ ಬೆರಳು ಮುದ್ರೆಗಳನ್ನು ಜಪ್ತಿ ಪಂಚನಾಮೆಯಡಿ ಸಂಗ್ರಹಿಸಿರುತ್ತೇನಂದು ಹಾಗೂ ದಿನಾಂಕ 26-07-2010ರಂದು 1ನೇ ಆರೋಪಿಯನ್ನು ಠಾಣೆಗೆ ಕರೆಸಿ ಆತನ ರುಜುಗಳನ್ನು ಚಾಸಾ-4 ಮತ್ತು 5ರವರ ಸಮಕ್ಷಮ ಜಪ್ತಿ ಪಂಚನಾಮೆಯಡಿ

ಪಡೆದುಕೊಂಡಿರುತ್ತೇನೆಂದು ಹಾಗೂ ದಿನಾಂಕ 30-07-2010 ರಂದು 2 ನೇ ಆರೋಪಿಯನ್ನು ವಶಕ್ಕೆ ಪಡೆದು ಆತನ ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಂಡು ಅದೇ ದಿನ ಚಾಸಾ-4 ಮತ್ತು 5 ರವರ ಸಮಕ್ಷಮ ಆರೋಪಿಯ ಮಾದರಿ ಬರವಣಿಗೆ ಮತ್ತು ರುಜುಗಳನ್ನು ಜಪ್ತಿ ಪಂಚನಾಮೆಯಡಿ ಪಡೆದಿರುತ್ತೇನೆಂದು ಹಾಗೂ ಆತನನ್ನು ತಮ್ಮ ಸಿಬ್ಬಂದಿಗಳ ಮುಖಾಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲು ಕಳುಹಿಸಿರುತ್ತೇನೆಂದು ಹಾಗೂ ದಿನಾಂಕ 30-11-2010 ರಂದು 1 ನೇ ಆರೋಪಿಯನ್ನು ಠಾಣೆಗೆ ಕರೆಯಿಸಿ ಆತನ ಬೆರಳು ಮುದ್ರೆಯನ್ನು ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತಿ ಪಂಚನಾಮೆಯಡಿ ಪಡೆದುಕೊಂಡಿರುತ್ತೇನೆಂದು ಹಾಗೂ ತನ್ನ ವರ್ಗಾವಣೆಯಾದ ಕಾರಣ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-30 ರವರಿಗೆ ಹಸ್ತಾಂತರಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ**?**

ಉಃ

ಪ್ರಶ್ನೆಃ **19** ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ?

ಉ**:**

ಪ್ರಶ್ನೆಃ **20** ಈ ಪ್ರಕರಣದಲ್ಲಿ ಯಾವುದಾದರೂ ನಿಮ್ಮ ಪರ ದಾಖಲಾತಿಗಳನ್ನು ಹಾಜರುಪಡಿಸುತ್ತೀರ?

ಉಃ

ಪ್ರಶ್ನೆಃ **21** ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವದು ಇದೆಯಾ?

ಉ

(ಮೇಲಿನ ಆರೋಪಿ ಹೇಳಿಕೆಯನು ನನ್ನ ಸಮಕ್ಷಮ ನನ್ನಿಂದ ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಪ್ರಶ್ನೆಗಳನ್ನು ಓದಿ, ತಿಳಿಸಿ ಹೇಳಿದ್ದು, ಅವುಗಳನ್ನು ತಿಳಿದುಕೊಂಡು ಅವರು ಕೊಟ್ಟ ಉತ್ತರಗಳನ್ನು ಅವರಂತೆಯೇ ದಿನಾಂಕ 20-03-2024 ರಂದು ದಾಖಲಿಸಿಕೊಳ್ಳಲಾಗಿದೆ)

ಜೇವರ್ಗಿ
20-03-2024

**(ಸಂದೀಪ್.ಎ.ನಾಯಿಕ್)**
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ

ಆಪಾದಿತನ ಸಹಿ